ಓಎಸ್ ನಂಃ 203/2019 ಪಿ.ಡಬ್ಲ್ಯೂ- 2

ದಿನಾಂಕಃ 28.02.2026 ರಂದು ಸಾಕ್ಷಿದಾರರಿಗೆ ಪ್ರಮಾಣ ವಚನ ಮಾಡಿಸಲಾಯಿತು.

ಪಾಟೀಸವಾಲುಃ ಪ್ರತಿವಾದಿಯ ಪರ ಶ್ರೀ ಎಸ್ ಆರ್ ಬಿ ವಕೀಲರಿಂದಃ

ವಾದಿ ತಾಯಿಯನ್ನು ನೋಡಿರುತ್ತೀರಾ ಎಂದರೆ ನೋಡಿರುತ್ತೆನೆ. ಸದರಿ ವಾದಿಯ ತಾಯಿ ಯಾವ ಊರಿನಲ್ಲಿ ತೀರಿಕೊಂಡಿರುತ್ತಾರೆ ಎಂದರೆ ನಮ್ಮ ಊರಿನಲ್ಲಿ ಎನ್ನುತ್ತಾರೆ. ಅಂತ್ಯ ಕ್ರಿಯೆ ಎಲ್ಲಿ ಆಗಿರುತ್ತದೆ ಎಂದರೆ ಗೊತ್ತಿಲ್ಲ ಗಂಗಮ್ಮ 50 ವರ್ಷಗಳಿಂದ ನಿಮ್ಮ ಊರಿನಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ವಾದಿಗೆ ಯಾವ ಊರಿನಲ್ಲಿ ಮದುವೆ ಆಗಿರುತ್ತದೆ ಎಂದರೆ ನಮ್ಮ ಊರಿನಲ್ಲಿ ಎನ್ನುತ್ತಾರೆ. ವಾದಿಗೆ 1 ನೇ ಪ್ರತಿವಾದಿ ಮದುವೆ ಮಾಡಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದಿರಾ ಎಂದರೆ ಸರಿಯಲ್ಲ. ಪ್ರಸುತ್ತ ದಾವೆ ಎಷ್ಟು ಆಸ್ತಿಗಳ ವಿರುದ್ಧ ಹಾಕಿರುತ್ತಾರೆ ಎಂದರೆ ಮನೆ ಮತ್ತು ಜಮೀನು ಎನ್ನುತ್ತಾರೆ. ದಾವಾ ಆಸ್ತಿಯಲ್ಲಿ ಪ್ರತಿವಾದಿಗಳು ಇರುತ್ತಾರೆ ಎಂದರೆ ವಾದಿ ಸ್ವಾದಿನದಲ್ಲಿ ಇರುತ್ತಾರೆ.ದಾವಾ ಆಸ್ತಿಯನ್ನು 1 ನೇ ಪ್ರತಿವಾದಿ ಕೊಂಡುಕೊಂಡಿರುತ್ತಾರೆ ಎಂದರೆ ಅವರ ತಂದೆ ಚೆನ್ನಪ್ಪನ ಹೆಸರಿನಲ್ಲಿ ಇರುತ್ತದೆ. ಸದರಿ ಚೆನ್ನಪ್ಪನ ಹೆಸರಿಗೆ ದಾವಾ ಆಸ್ತಿ ಹೇಗೆ ಬಂತು ಹೇಳಲು ಬರುತ್ತದಾ ಎಂದರೆ ಗೊತ್ತಿಲ್ಲ. ದಾವಾ ಆಸ್ತಿ ಬಿಟ್ಟು ಪ್ರತಿವಾದಿಗಳಿಗೆ ಬೇರೆ ಆಸ್ತಿಗಳು ಇಲ್ಲ ಎಂದರೆ ಹೌದು. ಈ ಮೊದಲು ದಾವಾ ಆಸ್ತಿ ಬಿಟ್ಟು ಬೇರೆ ಆಸ್ತಿ ಇಲ್ಲ ಎಂದರೆ ಇಲ್ಲ. 1 ನೇ ಪ್ರತಿವಾದಿ ಬೋವಿ ಜನಾಂಗದವರು ಎಂದರೆ ಹೌದು. 1 ನೇ ಪ್ರತಿವಾದಿ ಬಂಡೆ ಕೆಲಸ ಮಾಡುತ್ತಿದ್ದರು ಎಂದರೆ ಹೌದು. ಬಂಡೆ ಕೆಲಸ ಮಾಡುತ್ತಿದ್ದರು ಅದರಲ್ಲಿ ಬಂದ ಸಂಪಾದನೆಯಿಂದ 1 ನೇ ಪ್ರತಿವಾದಿ

ದಾವಾ ಆಸ್ತಿ ಖರೀದಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಅವರ ತಂದೆಯ ಆಸ್ತಿ.

ವಾದಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದಿರಿ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

(ಸಾಕ್ಷಿದಾರರ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಅನುಸಾರವಾಗಿ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮ್ಹಾಡಲಾಯಿತು.)

ಸಾ ಓ ಹೇ ಕೇ ಸ ಅದೆ.

Sd/-
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಚಿಂತಾಮಣಿ.